# ಪುರಸಭೆ ಕುಂದಾಪುರ – 576201,

# ಉಡುಪಿ ಜಿಲ್ಲೆ

**ಕ್ರ.ಸಂ:ಪುಸಕುಂ/ಕಾಮಗಾರಿ/ಟೆಂಡರ್/2008-09.** **ದಿನಾಂಕ:25-08-2008.**

## ಟೆಂಡರ್ ಪ್ರಕಟಣೆ ::

ಈ ಮೂಲಕ ಲೋಕೋಪಯೋಗಿ ಇಲಾಖೆ, ಮತ್ತು ಈ ಪುರಸಭೆಯಲ್ಲಿ ನೊಂದಾಯಿತ ಅರ್ಹ ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನಂದರೆ, ಕುಂದಾಪುರ ಪುರಸಭೆಗೆ ಈ ಕೆಳಗೆ ತೋರಿಸಿದ ಕಾಮಗಾರಿಯು ಕುಡ್ಸಂಪ್ ಅನುದಾನದಲ್ಲಿ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ಇಚ್ಚೆಯುಳ್ಳ ಎಲೆಕ್ಟ್ರಿಕಲ್ ಗುತ್ತಿಗೆದಾರರು ನಿರ್ದಿಷ್ಟ ನಮೂನೆಯಲ್ಲಿ ಕಾಮಗಾರಿಯ ಹೆಸರನ್ನು ಬರೆದು ಮೊಹರು ಮಾಡಿದ ದರಪಟ್ಟಿಯನ್ನು ದ್ವಿಪ್ರತಿಯಲ್ಲಿ ದಿನಾಂಕ:11-09-2008 ರಂದು ಸಾಯಂಕಾಲ 4.30 ಗಂಟೆಯೊಳಗಾಗಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

| ಕ್ರ.ಸಂ. | ಕಾಮಗಾರಿಯ ಹೆಸರು | ಟೆಂಡರ್‌ಗೆ ಇಡಲಾದ ಹಣ | ಇಎಂಡಿ ಮೊತ್ತ | ಟೆಂಡರ್ ಮಾದರಿ | ಕೆಲಸ ಪೂರ್ತಿ ಗೊಳಿಸ ಬೇಕಾದ ಅವಧಿ | ದರ್ಜೆ | ಟೆಂಡರ್ ಫಾರಂ ಬೆಲೆ |
|---|---|---|---|---|---|---|---|
| (1) | ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ಫೆರಿ ರಸ್ತೆಯ ಅಂತ್ಯಭಾಗದಲ್ಲಿ ಇರುವ ಉದ್ಯಾನವನದಲ್ಲಿ ವಿದ್ಯುತ್ತೀಕರಣ ಕಾಮಗಾರಿ. | 2,52,000-00 | 6,300-00 | ಶೇಕಡಾ ವಾರು | 1 ತಿಂಗಳು | 3ನೇ ದರ್ಜೆ & ಮೇಲ್ಪಟ್ಟು | 1,000--00 |

**ಸೂಚನೆಗಳು:-**

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ತಮ್ಮ ಲೈಸನ್ಸ್ ನೋಂದಣಿ ಪತ್ರ, ಅನುಭವ ಪ್ರಮಾಣ ಪತ್ರ, ವ್ಯಾಟ್ ಮತ್ತು ಇ.ಎಂ.ಡಿ.ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ನ ಡಿ.ಡಿ.ಯನ್ನು ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ ಇವರ ಹೆಸರಿಗೆ ತೆಗೆದು ಸಲ್ಲಿಸುವುದು.
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11-09--2008 ಸಾಯಂಕಾಲ 4.30 ಗಂಟೆ.
3) ಸ್ವೀಕರಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 11-09--2008 ರಂದು ಅಥವಾ ಅನುಕೂಲವಾದ ದಿನಾಂಕ ನಿಗದಿಪಡಿಸಿ ತೆರೆಯಲಾಗುವುದು.

**ಷರತ್ತುಗಳು:**

1) ಮೇಲಿನ ಕಾಮಗಾರಿಗೆ ಯಾವುದೇ ಸಾಮಾಗ್ರಿಗಳನ್ನು ಇಲಾಖೆಯಿಂದ ಒದಗಿಸಲಾಗುವುದಿಲ್ಲ. ಹಾಗೂ ಕಾಮಗಾರಿಗೆ ಉಪಯೋಗಿಸುವ ಸಾಮಾಗ್ರಿಗಳನ್ನು ಕಾರ್ಯಾಲಯದ ಅಭಿಯಂತರರವರಿಂದ ಪರೀಕ್ಷೆಗೊಳಪಡಿಸಿ ನಿರ್ವಹಿಸತಕ್ಕದ್ದು.
2) ಟೆಂಡರ್ ಮಂಜೂರಾತಿಯು ಸಕ್ಷಮ ಪ್ರಾಧಿಕಾರದ ಅಧಿಕಾರಕ್ಕೆ ಒಳಪಟ್ಟಿದೆ.
3) ಸರಕಾರವು ಕಾಲಕಾಲಕ್ಕೆ ನೀಡುವ ಆದೇಶಗಳಿಗನುಸಾರವಾಗಿ ಭದ್ರತಾ ಠೇವಣಿ, ರಾಜಧನ ಮಾರಾಟಕರ ಇತ್ಯಾದಿಗಳನ್ನು ಬಿಲ್ಲುಗಳಲ್ಲಿ ಕಟಾಯಿಸಲಾಗುವುದು.
4) ಕಾಮಗಾರಿಗಳನ್ನು ಕೈಗಿತ್ತಿಕೊಳ್ಳುವ ಗುತ್ತಿಗೆದಾರರಿಂದ ಶೇ.1 ರಷ್ಟು ಕಾರ್ಮಿಕ ಕಲ್ಯಾಣ ಸುಂಕ ಕಡಿತಗೊಳಿಸಲಾಗುವುದು. ಅದಲ್ಲದೆ ಸದ್ರಿ ಕಾಯಿದೆ ಆದೇಶಗಳಿಗೆ ಅನುಗುಣವಾಗಿ ಸುಂಕವನ್ನು ಗಣನೆಗೆ ತೆಗೆದುಕೊಂಡು ಟೆಂಡರ್ ದರ ನಮೂದಿಸತಕ್ಕದ್ದು.
5) ಕಾಮಗಾರಿಯು ಪುರಸಭಾ ಕಿರಿಯ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಇವರ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.

7) ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅಥವಾ ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದಲ್ಲಿ ಅಂತಹವರ ಗುತ್ತಿಗೆಯನ್ನು ರದ್ದುಪಡಿಸಿ,ಇ.ಎಂ.ಡಿ.ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8) ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಪ್ರತಿಯೊಂದು ಕಾಮಗಾರಿಗೆ ಪ್ರತ್ಯೇಕ ಮೊಹರು ಮಾಡಿದ ಕೋಟೆಯಲ್ಲಿ ದರಪಟ್ಟಿಯನ್ನು ಕಾಮಗಾರಿಯ ಹೆಸರನ್ನು ನಮೂದಿಸಿ ನೀಡತಕ್ಕದ್ದು.

9) ಷರತ್ತುಗಳನ್ನೊಳಗೊಂಡ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

10) ಯಾವುದೇ ಕಾರಣ ನೀಡದೇ ಟೆಂಡರ್ ತಿರಸ್ಕರಿಸುವ ಹಾಗೂ ಅಂಗೀಕರಿಸುವ ಅಧಿಕಾರವು ಕೆಳಗೆ ಸಹಿ ಮಾಡಿದವರಿಗಿರುತ್ತದೆ.

11) ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಾರ್ಯಾಲಯದ ವೇಳೆಯಲ್ಲಿ ಸಂಪರ್ಕಿಸಬಹುದು.

12) ಕಾಮಗಾರಿ ಪ್ರಾರಂಭಿಸುವ ಮೊದಲು, ಪ್ರಗತಿಯ ಪ್ರತಿ ಹಂತದಲ್ಲಿ ಮತ್ತು ಮುಕ್ತಾಯ ಗೊಂಡ ನಂತರ ಒಟ್ಟು ಕನಿಷ್ಟ 10 ಛಾಯಾಚಿತ್ರ ತೆಗೆಸಿ ಸಲ್ಲಿಸಲು ಸೂಚಿಸಲಾಗಿದೆ.

13) ಕಾಮಗಾರಿಕೆಯನ್ನು ಪೂರ್ಣಗೊಳಿಸಿದ ನಂತರ ಮೂರನೇ ದಂಡದ ವತಿಯಿಂದ ಪರೀಕ್ಷಿಸಿದ ನಂತರ ಹಣ ಪಾವತಿ ಮಾಡಲಾಗುವುದು.

14) ಕಾಮಗಾರಿಕೆಯು ಪೂರ್ಣಗೊಂಡ ನಂತರ ಕನಿಷ್ಟ ಎರಡು ವರ್ಷದವರೆಗೆ ಯಾವುದೇ ದುರಸ್ತಿ ಕಂಡು ಬಂದಲ್ಲಿ ಸದರಿ ಕಾಮಗಾರಿಯನ್ನು ತಾವೇ ನಿರ್ವಹಣೆ ಮಾಡತಕ್ಕದ್ದು.

ಮುಖ್ಯಾಧಿಕಾರಿ,
ಪುರಸಭೆ,ಕುಂದಾಪುರ.

ಅಧ್ಯಕ್ಷರು,
ಪುರಸಭೆ,ಕುಂದಾಪುರ.